ಬಂಟ್ವಾಳ ತಾಲ್ಲೂಕಿನ ನಂದರ ಬೆಟ್ಟು ಏನಲ್ಲಿ ಸೇತುವ

೧೬೫. ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ). — ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟ್ವಾಳ ತಾಲ್ಲೂಕಿನ (ದಕ್ಷಿಣ ಕನ್ನಡ ಜಿಲ್ಲೆ) ಕನ್ಯಾನ ಪೆರುವಾಯಿ ರಸ್ತೆಯ ನಂದರಬೆಟ್ಟು ಎಂಬಲ್ಲಿ ಸೇತುವೆ ರಚಿಸುವ ಕಾಮಗಾರಿಯು ೧೯೮೪-೮೫ ರಾಜ್ಯ ಆಯವ್ಯಯದಲ್ಲಿ ಸೇರಿಸಿತ್ತಲ್ಲವೆ ?

ಆ) ಹಾಗಿದ್ದಲ್ಲಿ ಇಂದಿನವರೆಗೆ ಸೇತುವೆಯ ಕೆಲಸವು ಪ್ರಾರಂಭವಾಗದೇ ಇರಲು ಕಾರಣ ಗಳೇನು ?

ಇ) ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸೇರಿಸಿತ್ತು.

ಆ) ೧೯೮೬-೮೫ರಲ್ಲಿ ಈ ಕಾಮಗಾರಿಗೆ ಕೇವಲ ಒಂದು ಸಾವಿರ ರೂಪಾಯಿ ಮಾತ್ರ ಅನುದಾನ ವಿದ್ದುದರಿಂದ ಅಂದಾಜುಪಟ್ಟಿ ಮಂಜೂರಾಗಿಲ್ಲಿ. ಅಲ್ಲದೆ ೧೯೮೫-೮೬ ಹಾಗೂ ೧೯೮೬-೮೭ರ ರಾಜ್ಯ ಆಯವ್ಯಯದಲ್ಲಿ ಸೇರಿರಲಿಲ್ಲ. ದಿನಾಂಕ ೧-೪-೧೯೮೭ರಿಂದ ಜಿಲ್ಲಾ ಪರಿಷತ್ ರಚನೆಯಾದ ನಂತರ ಈ ಕೆಲಸವು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬಂದಿದ್ದು ೧೯೮೭-೮೮, ೧೯೮೮-೮೯ ಹಾಗೂ ೧೯೮೯-೯೦ರ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿಯೂ ಸೇರಿಲ್ಲ. ಆದುದರಿಂದ ಈ ಕಾಮಗಾರಿಯನ್ನು ಇಂದಿನವರೆಗೂ ಪ್ರಾರಂಭಿಸಲು ಸಾಧ್ಯವಾಗಿಲ್ಲ,

ಇ) ಈ ಕಾಮಗಾರಿಯನ್ನು ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಸೇರಿಸಿ ಸಾಕಷ್ಟು ಅನುದಾನ ವನ್ನು ನೀಡಿ ಕೆಲಸ ಪ್ರಾರಂಭ ಮಾಡಲು ಜಿಲ್ಲಾ ಪರಿಷತ್ತಿನವರು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎ. ರುಕ್ಮಯ್ಯ ಪೂಜಾರಿ.— ಸನ್ಮಾನ್ಯ ಅಧ್ಯಕ್ಷರೇ, ೧೯೮೪-೮೫ರ ಬಜೆಟ್‌ನಲ್ಲಿ ಈ ಕನ್ಯಾನ ಪೆರುವಾಯಿ ರಸ್ತೆ ಕಾಮಗಾರಿಯೆನ್ನು ಸೇರಿಸಲಾಗಿತ್ತು ಎಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ ನಾವು ಆಗಿನ ಕಾಮಗಾರಿ ಮಂತ್ರಿಗಳನ್ನು ಪ್ರಶ್ನೆ ಮಾಡಿದಾಗ ಆ ಕೆಲಸ ಪ್ರಾರಂಭ ಮಾಡುವುದಕ್ಕೆ ಬೇಕಾದಷ್ಟು ಹಣವನ್ನು ಒದಗಿಸುತ್ತೇವೆ ಎಂಬ ಭರವಸೆ ಕೊಟ್ಟಿದ್ದರು. ಈ ಸದನದಲ್ಲಿ ಭರವಸೆ ಕೊಟ್ಟ ನಂತರ ಅದರ ಜವಾಬ್ದಾರಿ ಸರಕಾರಕ್ಕೆ ಇಲ್ಲವೇ ? ಇಲ್ಲದಿದ್ದರೆ ಇದನ್ನು ಆಯವ್ಯಯದಲ್ಲಿ ಸೇರಿಸುವ ಆವಶ್ಯಕತೆ ಏನಿತ್ತು ?

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಇದು ಜಿಲ್ಲಾ ಪರಿಷತ್ ರಸ್ತೆ ಆಗಿರಲಿಲ್ಲ. ೧೯೮೪-೮೫ರಲ್ಲಿ ಇದಕ್ಕೆ ಐದು ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡುವುದರ ಮೂಲಕ ಇದನ್ನು ಆಯವ್ಯಯದಲ್ಲಿ ಸೇರಿಸಿದ್ದರು. ಆಗ ಜಿಲ್ಲಾ ಪರಿಷತ್ತು ಇರಲಿಲ್ಲ. ಈ ಜಿಲ್ಲಾ ಪರಿಷತ್ತು ರಚನೆ ಆದನಂತರ ಇದನ್ನು ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಲಾಗಿದೆ. ಆದಾದನಂತರ ೧೯೮೭-೮೮, ೧೯೮೮-೮೯, ೧೯೮೯-೯೦ರಲ್ಲಿ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಅವರು ಇದನ್ನು ಸೇರಿಸಿಕೊಳ್ಳಲಿಲ್ಲ. ಆ ಕಾರಣ ದಿಂದ ನಾವು ಈ ರಸ್ತೆಯನ್ನು ಈ ವರ್ಷದ ಆಯವ್ಯಯದಲ್ಲಿ ಸೇರಿಸುವುದಕ್ಕೆ ಆಗಲಿಲ್ಲ. ಜೊತೆಗೆ ಇದು ಜಿಲ್ಲಾ ಪರಿಷತ್ತಿನ ಆಸ್ತಿಯಾದುದರಿಂದ ಅದನ್ನು ಸರಕಾರ ವಹಿಸಿಕೊಳ್ಳಬೇಕಾದರೆ ಹಲವಾರು ನಿಯಮಾವಳಿ ಗಳನ್ನು ನಾವು ಅನುಸರಿಸಬೇಕಾಗುತ್ತದೆ. ಅವರ ಕನ್‌ಸೆಂಟ್ ಬೇಕಾಗುತ್ತದೆ. ಇದನ್ನು ಮೊದಲನೇ ದರ್ಜೆಗೆ ಏರಿಸಿ ನಂತರ ಕ್ರಮ ಕೈಗೊಳ್ಳಬೇಕಾಗುತ್ತದೆ. ಮೊದಲು ಪ್ರಿಲಿಮಿನರೀಸ್ ಎಂದರೆ ಪೂರ್ವ ನಿಯಮಾವಳಿಗಳನ್ನು ಮಾಡುವುದರ ಮೂಲಕ ಈ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಪರಿ ಶೀಲಿಸುತ್ತೇನೆ ಎಂಬ ಮಾತನ್ನು ತಿಳಿಸಬಯಸುತ್ತೇನೆ.

ಶ್ರೀ ಎ ರುಕ್ಮಯ್ಯ ಪೂಜಾರಿ.— ಸನ್ಮಾನ್ಯ ಅಧ್ಯಕ್ಷರೇ, ಇದು ಜಿಲ್ಲಾಪರಿಷತ್ತಿಗೆ ವರ್ಗಾವಣೆ ಯಾಗಿದ್ದು ೧೯೮೭ರಲ್ಲಿ. ೧೯೮೪-೮೫ರ ಬಜೆಟ್‌ನಲ್ಲಿ ಇದನ್ನು ಸೇರಿಸಿತ್ತು. ಆಗ ಸನ್ಮಾನ್ಯ ಸಚಿವರು ಭರವಸೆ ಕೂಡಾ ಕೊಟ್ಟಿದ್ದರು. ಈ ಸದನದಲ್ಲಿ ಭರವಸೆ ಕೊಟ್ಟ ನಂತರ ಈ ಕೆಲಸವನ್ನು ಏತಕ್ಕೆ ಪ್ರಾರಂಭ ಮಾಡಲಿಲ್ಲ. ಇದನ್ನು ೧೯೮೪-೮೫ರ ಬಜೆಟ್‌ನಲ್ಲಿ ಸೇರಿಸಿತ್ತು. ಇದು ಜಿಲ್ಲಾ ಪರಿಷತ್‌ಗೆ ವರ್ಗಾವಣೆಯಾದುದು ೧೯೮೭ ರಲ್ಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಸರಕಾರದ ವತಿಯಿಂದ ಕೊಟ್ಟಂಥ ಎಲ್ಲಾ ಆಶ್ವಾಸನೆಗಳನ್ನೂ ಜಿಲ್ಲಾ ಪರಿಷತ್ತು ಅನುಷ್ಠಾನಕ್ಕೆ ತರಬೇಕು. ಬಹುಶಃ ಈ ದಿಸೆಯಲ್ಲಿ ಇಸ್ತು ವರ್ಗಾವಣೆ ಆಯಿತೇ

ಹೊರತು, ಕೊಟ್ಟ ಆಶ್ವಾಸನೆ ವರ್ಗಾವಣೆ ಆಗಲಿಲ್ಲ ಎಂದು ಕಾಣುತ್ತದೆ. ನಾನು ರೆಕಾರ್ಡ್ ವೇರಿಫೈ ಮಾಡುತ್ತೇನೆ. ಅದೇನಾದರೂ ಆಗದಿದ್ದರೆ ಅದನ್ನು ವರ್ಗಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರು ಮೈಸೂರು ರಸ್ತೆ ಅಭಿವೃದ್ಧಿ

೩೪೦ ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).— ಮಾನ್ಯ ನೀರಾವರಿ, ಲೋಕೋಪಯೋಗಿ, ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮೈಸೂರು ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆ ತುಂಬಾ ಹೆಚ್ಚಿಗೆ ಆಗಿರುವುದನ್ನು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ವಾಹನಗಳ ಓಡಾಟದ ಸಂಖ್ಯೆಗೆ ಅನುಗುಣವಾಗಿ ರಸ್ತೆಯನ್ನು ಅಭಿವೃದ್ಧಿಗೊಳಿಸುವ ಅವಶ್ಯಕತೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ದಿಶೆಯಲ್ಲಿ ಸರ್ಕಾರವು ಏನು ಕ್ರಮ ಕೈಗೊಂಡಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ.

ಇ) ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಕೆಲವು ಅಪಾಯಕಾರಿ ತಿರುವುಗಳನ್ನು ನೇರ ಮಾಡುವುದು, ಪಟ್ಟಣದ ಪ್ರದೇಶದಲ್ಲಿ ಹಾದುಹೋಗುವ ಭಾಗಗಳನ್ನು ಆಗಲ ಮಾಡುವುದು, ಕಿರಿದಾದ ಸೇತುವೆಗಳನ್ನು ಅಗಲಪಡಿಸುವುದು, ಅತಿ ಸಂಚಾರ ಒತ್ತಡ ಇರುವ ರಸ್ತೆಯ ಭಾಗಗಳನ್ನು ನಾಲ್ಕು ಪಥಗಳ ಜೋಡಿ ರಸ್ತೆಯನ್ನಾಗಿ ಮಾರ್ಪಡಿಸುವುದು ಮುಂತಾದ ಅಭಿವೃದ್ಧಿ ಕಾಮಗಾರಿಗಳನ್ನು ಸುಮಾರು ೮೨ ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ. ೧೯೮೯-೯೧ನೇ ಸಾಲಿನಲ್ಲಿ ಸುಮಾರು ೫೦ ಲಕ್ಷ ರೂ.ಗಳ ಅನುದಾನದಲ್ಲಿ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ.

ಶ್ರೀ ಎಂ. ಎಸ್. ಆತ್ಮಾನಂದ.— ನಾಲ್ಕು ಪಥಗಳ ಜೋಡಿ ರಸ್ತೆಯನ್ನಾಗಿ ಮಾರ್ಪಡಿಸುವ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಈ ಅಭಿವೃದ್ಧಿ ಕಾರ್ಯಗಳು ಯಾವ ಹಂತದಲ್ಲಿದೆ ಎಂದು ಕೇಳುವುದಕ್ಕೆ ಬಯಸುತ್ತೇನೆ. ಕಿರಿದಾದ ಸೇತುವೆಗಳನ್ನು ಅಗಲಪಡಿಸುವ ಕಾರ್ಯಕ್ರಮಗಳನ್ನೂ ಕೂಡಾ ಈ ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಮದ್ದೂರಿನ ಬಳಿ ಶಿಂಶಾ ನದಿಗೆ ಅಡ್ಡಲಾಗಿರುವ ಶಿಂಶಾ ನದಿ ಮೇಲಿನ ಸೇತುವೆ ೧೫೦ ವರ್ಷಗಳ ಹಳೆಯದಾಗಿದ್ದು ಈ ಸೇತುವೆ ಬಹಳ ಕಿರಿದಾಗಿದೆ, ಈ ಒಂದು ಸೇತುವೆಯನ್ನು ವಿಸ್ತರಿಸುವ ಅವಶ್ಯಕತೆ ಇದೆ ಎಂಬುದು ಸರಕಾರದ ಗಮನಕ್ಕೆ ಬಂದಿಲ್ಲವೇ, ಬಂದಿದ್ದರೆ ಇದನ್ನು ಅಗಲಪಡಿಸುವುದಕ್ಕೆ ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಇದೊಂದು ಬಹಳ ಪ್ರಮುಖ ವಾದಂಥ ರಸ್ತೆ. ಮೈಸೂರು ಜಿಲ್ಲೆಗಳ ಮೂಲಕ ಹಾದು ಹೋಗುವ ರಸ್ತೆ. ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಸುಮಾರು ೧೪೦ ಕಿಲೋಮೀಟರ್ ಉದ್ದದ ಈ ರಸ್ತೆಯಲ್ಲಿ ಒಂದು ದಿನಕ್ಕೆ ಸುಮಾರು ೧೦ ಸಾವಿರಕ್ಕಿಂತ ಹೆಚ್ಚು ವಾಹನಗಳ ಸಂಚಾರ ಇರತಕ್ಕಂಥ ರಸ್ತೆ ಆಗಿದೆ.

ಆದರೆ ಇದರಲ್ಲಿ ಹಲವಾರು ತಿರುವುಗಳು, ಇಕ್ಕಾಟ್ಟಾದ ರಸ್ತೆಗಳು ಇರುವುದರಿಂದ ಅಪಘಾತಗಳು ಆಗುವುದನ್ನು ಪ್ರತಿದಿವಸ ನಾವು ನೋಡುತ್ತಿದ್ದೇವೆ. ವಾಹನಗಳು ಹೋಗುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಮೈಸೂರು ಮತ್ತು ಬೆಂಗಳೂರು ರಸ್ತೆಯಲ್ಲಿ ಪ್ರಯಾಣ ಮಾಡುವುದೇ ಕಷ್ಟವೆನ್ನುವ ಭಾವನೆ ನಮಗೆ ಬಂದಿದೆ. ಆದರೂ ಕೂಡ ಇದು ರಾಷ್ಟ್ರೀಯ ಹೆದ್ದಾರಿಗೆ ಸೇರಲಿಲ್ಲ. ಇಲ್ಲಾ ಪಿ.ಆರ್.ಎಫ್.ಗೂ ಸೇರಲಿಲ್ಲ ರಾಜ್ಯದ ಹೆದ್ದಾರಿಯಾಗಿನೇ ಉಳಿದಿದೆ. ಅದಕ್ಕೆ ಬಹುಶಃ ಇಷ್ಟೊಂದು ಅಪಘಾತಗಳಿಗೆ ಕಾರಣವಾಗಿದೆ ಎಂದು ನನಗನ್ನಿಸುತ್ತದೆ. ಅನೇಕ ವರ್ಷಗಳಿಂದ ರಾಜ್ಯದ ರಿಸೋರ್ಸ್‌ನಲ್ಲಿ ಸುಮಾರು ೮೨ ಲಕ್ಷ ರೂಪಾಯಿಗಳ ಒಂದು ಅಂದಾಜು ಇಟ್ಟು ಈಗಾಗಲೇ ನಾವು ಸುಮಾರು ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ೧೨ ಲಕ್ಷ ರೂಪಾಯಿಗಳನ್ನು ನಾವು ರಾಜ್ಯದ